

## ಪಾದಯಾತ್ರೆಯ ವ್ರತ

ಯುಗಾದಿ ಸಮಯದಲ್ಲಿ ಉತ್ತರಕರ್ನಾಟಕದ ಪ್ರತಿ ಊರುಗಳಿಂದ ಶ್ರೀಶೈಲದ ಮಲ್ಲಿಕಾರ್ಜುನ ದರ್ಶನಕ್ಕೆ ಪಾದಯಾತ್ರೆಯಲ್ಲಿ ಹೊರಡಲು ಭಕ್ತರು ತಂಡೋಪತಂಡವಾಗಿ ಸಜ್ಜಾಗುತ್ತಾರೆ. ಈ ವರ್ಷವೂ ಬೆಳಗಾವಿ, ಬಾಗಲಕೋಟೆ, ವಿಜಯಪುರ ಜಿಲ್ಲೆಗಳಿಂದ ಸಹಸ್ರ ಸಂಖ್ಯೆಯಲ್ಲಿ ಪಾದಯಾತ್ರೆಯಲ್ಲಿ ಶ್ರೀಶೈಲಕ್ಕೆ ಸಾಗಿದರು.

ಒಂದು ಊರಿನಿಂದ 100ರಿಂದ 200, 300ರವರೆಗೆ ಭಕ್ತರ ತಂಡಗಳು ಕಾಲ್ನಡಿಗೆಯಲ್ಲಿ ಸಾಗುತ್ತವೆ. ಪಾದಯಾತ್ರಿಗಳು ತಮ್ಮ ಸಾಮಗ್ರಿ, ಸರಂಜಾಮುಗಳಿಗಾಗಿ ವಾಹನ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಈಗ ವಾಹನಗಳ ಸೌಲಭ್ಯ ಇದ್ದರೂ ಕಾಲ್ನಡಿಗೆಯಲ್ಲಿ ಶ್ರೀಶೈಲಕ್ಕೆ ಹೋಗಿ ದೇವರ ದರ್ಶನ ಪಡೆದುಕೊಳ್ಳುವ ವ್ರತವನ್ನು ಇವತ್ತಿಗೂ ಉಳಿಸಿಕೊಂಡು ಬಂದಿದ್ದಾರೆ. ಶ್ರೀಶೈಲಕ್ಕೆ ಹೊರಡುವ ಮುನ್ನ ಪಾದಯಾತ್ರಿಗಳನ್ನು ಇಡೀ ಊರಿನ ಜನರೆಲ್ಲ ಸೇರಿ ಬೀಳ್ಕೊಡುತ್ತಾರೆ.

650ರಿಂದ 700 ಕಿ.ಮೀ.ವರೆಗೆ ಸುಡು ಬಿಸಿಲಿನಲ್ಲಿ ನಡೆದುಕೊಂಡು ಸಾಗುವರು. ಪ್ರತಿದಿನ 40 ಕಿ.ಮೀ. ಕ್ರಮಿಸುವರು. ಸತತ 25–30 ವರ್ಷಗಳಿಂದ ಪ್ರತಿವರ್ಷವು ಈ ಪದ್ಧತಿ ಅನುಸರಿಸುತ್ತಿದ್ದಾರೆ. ಕೆಲವರು ಮರಗಾಲು ಕಟ್ಟಿಕೊಂಡು ಪಾದಯಾತ್ರೆ ಮಾಡಿ ತಮ್ಮ ವ್ರತ ಪಾಲಿಸುತ್ತಾರೆ. ಪಾದಯಾತ್ರಿಗಳಿಗೆ ದಾರಿಯುದ್ದಕ್ಕೂ ಪಾನೀಯ, ಊಟ, ಉಪಾಹಾರ, ಮಜ್ಜಿಗೆ, ಹಣ್ಣು, ವೈದ್ಯಕೀಯ ಸೇವೆಯ ತಂಡಗಳು ಇರುವುದು ವಿಶೇಷ. ಇತ್ತೀಚಿನ ವರ್ಷಗಳಲ್ಲಿ ಪಾದಯಾತ್ರೆಯಲ್ಲಿ ಯುವಕರ ಸಂಖ್ಯೆ ವೃದ್ಧಿಯಾಗಿದೆ.

–ಬಾಲಶೇಖರ ಬಂದಿ, ಮೂಡಲಗಿ

## ಚನಂಗ್ ಸಾರಿ

ಇತ್ತೀಚೆಗೆ ಬಾಲಿ ಪ್ರವಾಸಕ್ಕೆ ಹೋಗಿದ್ದೆ. ಅಲ್ಲಿನ ಎಲ್ಲ ಮನೆ, ಅಂಗಡಿ ಮುಂಗಟ್ಟುಗಳ ಮುಂದೆ ತಾಳೆಗರಿ, ತೆಂಗಿನಗರಿ ಅಥವಾ ಬಾಳೆ ಎಲೆಯಲ್ಲಿ ಮಾಡಿರುವ ಚಿಕ್ಕ ತಟ್ಟೆ/ಬುಟ್ಟಿಯಲ್ಲಿ ಎಲೆ, ಅಡಿಕೆ, ಸುಣ್ಣ, ಹೊಗೆಸೊಪ್ಪು ಹೂವುಹಣ್ಣುಗಳು, ಗರಿಕೆ, ಅಕ್ಕಿ, ಅನ್ನ, ಎಣ್ಣೆ, ಬಿಸ್ಕತ್ತು, ತಿಂಡಿ, ತಿನಿಸುಗಳಿಂದ ಹಿಡಿದು ಸಿಗರೇಟು, ನಾಣ್ಯ, ಬ್ಯಾಂಕ್ ನೋಟಿನಂತಹ ಹಲವಾರು ವಸ್ತುಗಳನ್ನಿರಿಸಿ ಅದರ ಜೊತೆಯಲ್ಲಿ ಊದುಕಡ್ಡಿ ಹಚ್ಚಿರುವುದನ್ನು ನೋಡಿದೆವು. ಕುತೂಹಲದಿಂದ ಅದೇನೆಂದು ನಮ್ಮ ಪ್ರವಾಸದ ಮಾರ್ಗದರ್ಶಿಯನ್ನು ಕೇಳಿದೆ. ಅದಕ್ಕವರು, ಅದು ಬಾಲಿ ನಿವಾಸಿಗಳು ದೇವರಿಗೆ ಕೃತಜ್ಞತೆ ಸಲ್ಲಿಸುವ ವಿಧಾನ ಎಂದರು. ಅದರಂತೆ ಚಿತ್ರದಲ್ಲಿ ಕಾಣುತ್ತಿರುವುದು ಅಲ್ಲಿನವರು ಪ್ರತಿ ದಿನವೂ ಮನೆಗಳ ಮುಂದೆ, ಅಂಗಡಿ ಮುಂಗಟ್ಟುಗಳ ಮುಂದೆ, 'ಪುರ' ಎಂದು ಕರೆಯುವ ದೇವಸ್ಥಾನಗಳಲ್ಲಿ ಇರಿಸುವ 'ಚನಂಗ್ ಸಾರಿ' ಎಂದು ತಿಳಿಯಿತು. ಬಾಲಿ ಭಾಷೆಯಲ್ಲಿ 'ಚನಂಗ್' ಅಂದರೆ ತಟ್ಟೆ/ಬುಟ್ಟಿ. 'ಸಾರಿ' ಅಂದರೆ ಅರ್ಪಿಸುವ ವಸ್ತುಗಳು. ಆದ್ದರಿಂದ ಇದು ಬಾಲಿಯ ಜನರು ದೇವರಿಗೆ ಅರ್ಪಿಸುವ ನೈವೇದ್ಯ ಎನ್ನಬಹುದು. ನಮ್ಮಲ್ಲಿ ಬೆಳಿಗ್ಗೆ ಎದ್ದೊಡನೆ ಮನೆ ಮುಂದಿನ ನೆಲ, ಅಂಗಳ ಸಾರಿಸಿ ರಂಗೋಲಿ ಇಡುವಂತೆ ಬಾಲಿಯಲ್ಲಿ ಮುಂಜಾನೆ ತಮ್ಮ ದೈನಂದಿನ ಕೆಲಸ ಕಾರ್ಯ ಕೈಗೊಳ್ಳುವ ಮೊದಲು ಈ ಚನಂಗ್ ಸಾರಿ ಇರಿಸುತ್ತಾರೆ. ಊದುಕಡ್ಡಿ ಉರಿಯುತ್ತಿರುವಷ್ಟು ಹೊತ್ತು ಇದನ್ನು ತುಳಿಯಬಾರದು ಎಂಬ ನಂಬಿಕೆ ಬಾಲಿ ನಿವಾಸಿಗಳಲ್ಲಿದೆ.

–ಎಚ್.ಎಸ್. ನಂದಕುಮಾರ್, ಮಂಗಳೂರು






## ಕಲಾತ್ಮಕ ಕನ್ನಡಿಗಳು

ಕಣ್ಣಿನ ನೋಟದ ಪ್ರತಿ ವಸ್ತು ಜೀವಂತಿಕೆ ಪಡೆಯಲು ಅಂತಹ ಕೌಶಲವೂ ಬೇಕು. ಮನೆಯ ಗೃಹಾಲಂಕಾರದಲ್ಲಿ ಮುಖ್ಯವಾಗಿ ಕನ್ನಡಿಗೆ ಅದರದ್ದೇ ಆದ ಶೋಭೆಯಿದೆ. ಶೃಂಗಾರಗೊಳ್ಳಲು ನೆರವಾಗುವ ಕನ್ನಡಿಯೇ ಕಲಾತ್ಮಕವಾಗಿ ಸಿಂಗರಗೊಂಡರೆ ಹೇಗೆ? ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನ ವಜ್ರಳ್ಳಿಯ ಶರೀಫಾ ಬಿ. ಮುಲ್ಲಾ ಇಂತಹ ಸೃಜನಶೀಲ ಅಭಿವ್ಯಕ್ತಿಗೆ ಸಾಕ್ಷಿಯಾಗಿದ್ದಾರೆ.

ಶರೀಫಾ ಬಿ. ಮುಲ್ಲಾರವರು ತಮ್ಮ ಕುಟುಂಬದ ನಿತ್ಯ ಕಾಯಕದ ಜೊತೆಗೆ ಬಿಡುವಿನ ವೇಳೆಯಲ್ಲಿ ಇಂತಹ ಕ್ರಿಯಾಶೀಲ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಮನೆಯ ಒಳಾಂಗಣಕ್ಕೆ ಹೊಂದುವ ವಿವಿಧ ಬಣ್ಣ ಮತ್ತು ಗಾತ್ರದ ಆಕೃತಿಯಲ್ಲಿ ಕನ್ನಡಿಯನ್ನು ಅಲಂಕರಿಸುವ ಇವರು ನಿರುಪಯುಕ್ತ ವಸ್ತುಗಳನ್ನೇ ಬಳಸಿ ಸಿದ್ಧಗೊಳಿಸುವರು. ಕನ್ನಡಿಯ ಸುತ್ತಲೂ ಬಣ್ಣದ ದಾರ, ಕವಡೆ, ಬಟ್ಟೆ ಬಳಸಿ ಹೆಣೆಯುವ ಕಸೂತಿಯ ಕೌಶಲ ಸೃಜನಶೀಲತೆ ಸಾದರಪಡಿಸುತ್ತದೆ. ವಿಶೇಷ ದಿನಗಳಲ್ಲಿ ಉಡುಗೊರೆಯಾಗಿಯೂ ಈ ಕಲಾತ್ಮಕ ಕೊಡುಗೆಗಳನ್ನು ನೀಡುವ ಮೂಲಕ ಕನ್ನಡಿಯ ದೇಸೀತನದ ಕಲಾ ಜಾಣ್ಮೆಯನ್ನು ಆಸಕ್ತರಿಗೆ ಪರಿಚಯಿಸಬಹುದು. ಇದಲ್ಲದೆ ಅಡಿಕೆ ಸಿಪ್ಪೆ, ಅಡಿಕೆ ಹಾಳೆ, ತೆಂಗಿನ ಗರಿ, ಗೊರಟೆ ಹೀಗೆ ನಿರುಪಯುಕ್ತ ವಸ್ತುಗಳನ್ನೇ ಮನೆಯ ಗೋಡೆಯ ಆಲಂಕಾರಿಕ ವಸ್ತುಗಳನ್ನಾಗಿ ಜೋಡಿಸುವಲ್ಲಿಯೂ ಇವರ ಶ್ರಮ ಎದ್ದು ಕಾಣುತ್ತದೆ. ಇದರ ಜೊತೆಗೆ ಬಣ್ಣ ಬಣ್ಣದ ಹೂಗುಚ್ಛಗಳನ್ನು ಆಕರ್ಷಕವಾಗಿ ತಯಾರಿಸಿದ್ದಾರೆ.

–ದತ್ತಾತ್ರೇಯ ಭಟ್ಟ, ಕಣ್ಣಿಪಾಲ